ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 50-61
©*IIMRD*, Mysuru

IIMRD JOURNALS
www.iimrd.com

# ಮುಳಬಾಗಿಲು ಅರಸರು : ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ

**ಪವಿತ್ರ ವಿ**
ಸಹಾಯಕ ಪ್ರಾಧ್ಯಾಪಕರು, ಜಿ.ಎಫ್.ಜಿ.ಸಿ. ದೇವರಾಯ ಸಮುದ್ರ, ಮುಳಬಾಗಿಲು

**ಸಾರಾಂಶ: (Abstract)**

*ಮುಳಬಾಗಿಲು ಕರ್ನಾಟಕದ ಪ್ರಾಚೀನ ಐತಿಹಾಸಿಕ ಕೇಂದ್ರಗಳಲ್ಲಿ ಒಂದು. ಗಂಗ, ಚೋಳ, ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಸಾಮ್ರಾಜ್ಯ, ಹರಪನಾಯಕನಹಳ್ಳಿ ಪಾಳೇಪಟ್ಟು ಆಡಳಿತದ ಅಡಿಯಲ್ಲಿ ಈ ಪ್ರದೇಶವು ರಾಜಕೀಯ, ಆಡಳಿತ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿತು. "ಮುಳಬಾಗಿಲು ಅರಸರು" ಎಂಬುದು ಒಂದು ನಿರ್ದಿಷ್ಟ ಸ್ವತಂತ್ರ ರಾಜವಂಶಕ್ಕಿಂತಲೂ, ವಿವಿಧ ಮಹಾಸಾಮ್ರಾಜ್ಯಗಳ ಅಧೀನದಲ್ಲಿ ಸ್ಥಳೀಯವಾಗಿ ಆಡಳಿತ ನಡೆಸಿದ ಸಾಮಂತೀಯ ಅರಸರ ಸಮೂಹವನ್ನು ಸೂಚಿಸುತ್ತದೆ. ಈ ಲೇಖನವು ಶಾಸನಗಳು, ಸಾಹಿತ್ಯ ಮೂಲಗಳು ಮತ್ತು ಐತಿಹಾಸಿಕ ಅಧ್ಯಯನಗಳ ಆಧಾರದ ಮೇಲೆ ಮುಳಬಾಗಿಲು ಅರಸರ ಚಾರಿತ್ರಿಕ ಹಿನ್ನೆಲೆಯ ವಿಶ್ಲೇಷಣೆಯಾಗಿದೆ.*

**ಮುಖ್ಯಪದಗಳು (Keywords):** *ಮುಳಬಾಗಿಲು, ಗಂಗವಂಶ, ಸಾಮಂತೀಯ ವ್ಯವಸ್ಥೆ, ತಾಮ್ರಶಾಸನ, ಪೆಬ್ಬಣ, ನಂದಗಿರಿನಾಥ, ನಂದಿ ತಾಮ್ರಶಾಸನ*

## ಪೀಠಿಕೆ

ಕರ್ನಾಟಕದ ಸ್ಥಳೀಯ ಇತಿಹಾಸ ಅಧ್ಯಯನದಲ್ಲಿ ಪ್ರಾದೇಶಿಕ ಅರಸರು ಮತ್ತು ಸಾಮಂತೀಯ ಆಡಳಿತ ವ್ಯವಸ್ಥೆಯ ಅಧ್ಯಯನ ಅತ್ಯಂತ ಮಹತ್ವದ್ದಾಗಿದೆ. ಮುಳಬಾಗಿಲು ಅರಸರು ಈ ದೃಷ್ಟಿಯಿಂದ ಗಮನಾರ್ಹರಾಗಿದ್ದಾರೆ. ಇವರು ದೊಡ್ಡ ಸಾಮ್ರಾಜ್ಯಗಳ ಅಧೀನದಲ್ಲಿದ್ದರೂ, ಸ್ಥಳೀಯ ಆಡಳಿತ ಮತ್ತು ಜನಜೀವನದ ರೂಪುಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಈ ಅಧ್ಯಯನವು ಮುಳಬಾಗಿಲು ಅರಸರ ಇತಿಹಾಸವನ್ನು ಸಮಗ್ರವಾಗಿ ದಾಖಲಿಸುವ ಪ್ರಯತ್ನವಾಗಿದೆ. ಮುಳಬಾಗಿಲು ತಾಲೂಕು ಕರ್ನಾಟಕ ರಾಜ್ಯದ ಮೂಡಣ ದಿಕ್ಕಿನಲ್ಲಿರುವ 'ಮೂಡಲಬಾಗಿಲು' ಎಂದು ಕರೆಯಲ್ಪಟ್ಟಿದೆ. ಶಾಸನಗಳು ಮುಳಬಾಗಿಲನ್ನು 'ಮುಳವಾಗಿಲು', 'ಮುಳವಾಯಿ' ಎಂದು ದಾಖಲಿಸಿವೆ. ಈ ಹೆಸರುಗಳೇ ಸೂಚಿಸುವಂತೆ ಈ ಊರು ಕರ್ನಾಟಕದ 'ಬಾಗಿಲು' ಆಗಿತ್ತು. ತಿರುಪತಿಗೆ ಪ್ರಯಾಣ ಹೊರಟವರು ಇಲ್ಲಿನ ಆಂಜನೇಯನ ದರ್ಶನ ಪಡೆದು ಮುಂದೆ ಸಾಗುತ್ತಿದ್ದರು.

ಈ ಪರಂಪರೆ ಈಗಲೂ ಇದೆ. ಮುಳ ಎಂದರೆ ಆಂಜನೇಯ ಸ್ವಾಮಿ ಎಂಬ ಅರ್ಥವು ಇದೆ. ಬೆಂಗಳೂರಿನಿಂದ ನೂರು ಕಿ.ಮೀ. ದೂರದಲ್ಲಿರುವ ಮುಳಬಾಗಿಲು ಒಂದು ತಾಲೂಕು ಹಾಗೂ ತಾಲೂಕು

*Please cite this article as:* ಪವಿತ್ರ, ವಿ. (2026). ಮುಳಬಾಗಿಲು ಅರಸರು : ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 50–61

ಕೇಂದ್ರ. ಈ ತಾಲೂಕಿಗೆ ಶ್ರೀಮಂತ ಪರಂಪರೆ ಇದೆ. ಶಿಲಾಯುಗ ಕಾಲದಿಂದಲೇ ಈ ತಾಲೂಕಿನ ಹಲವು ಪ್ರದೇಶಗಳು ಜನವಸತಿ ಕೇಂದ್ರಗಳಾಗಿದ್ದವು. ಗಂಗ, ಬಾಣ, ನೊಳಂಬ, ವಿಜಯನಗರ ಅರಸರ ಕಾಲದಲ್ಲಂತೂ ಈ ತಾಲೂಕು ಬಹು ಪ್ರಾಧಾನ್ಯತೆ ಪಡೆದಿತ್ತು. ಇದಕ್ಕೆ ಸಾಕ್ಷಿ ಎಂಬಂತೆ ಈ ರಾಜವಂಶಗಳ ಹೆಚ್ಚು ಶಾಸನಗಳು ಈ ತಾಲೂಕಿನಲ್ಲಿ ದೊರೆತಿವೆ. ವಿಜನಯನಗರ ಕಾಲದಲ್ಲಿ ಮುಳಬಾಗಿಲು ಹೆಸರಿನಲ್ಲಿ ಒಂದು ದೊಡ್ಡ ರಾಜ್ಯವೇ ಇತ್ತು. ಮುಳಬಾಗಿಲು ಪ್ರದೇಶವನ್ನು ಪ್ರಾಚೀನ ಕಾಲದಿಂದಲೂ ವಿವಿಧ ರಾಜಮನೆತನಗಳು ಆಳಿದ್ದು, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇದು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಮೊದಲು ಬಾಣರು, ನಂತರ ಪಲ್ಲವರು, ಮತ್ತು ವೈಡುಂಬರರು ಆಳಿದರು, ವಿಜಯನಗರದ ಅಡಿಯಲ್ಲಿ ಇದು ಪ್ರಮುಖ ಆಡಳಿತ ಕೇಂದ್ರವಾಗಿತ್ತು.[1] ಲಕ್ಕಣ್ಣಡಣ್ಣಾಯಕ ಮತ್ತು ಮಾದನ್ನದಣ್ಣಾಯಕರು ಇಲ್ಲಿನ ಮುಖ್ಯ ಆಡಳಿತಗಾರರು. ವಿಜಯನಗರದ ಪತನದ ನಂತರ ಹೊಸಕೋಟೆಯ ತಿಮ್ಮೇಗೌಡ ಮತ್ತು ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟು, ಅಂತಿಮವಾಗಿ 1768 ರಲ್ಲಿ ಕರ್ನಲ್ ಕ್ಯಾಂಪ್‌ಬೆಲ್ ಇದನ್ನು ಬ್ರಿಟಿಷ್ ಆಡಳಿತಕ್ಕೆ ಸೇರಿಸಿದರು.

**ಭೌಗೋಳಿಕ ಸ್ಥಾನಮಾನ**

ಮುಳಬಾಗಿಲು–ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿನ ಒಂದು ತಾಲೂಕು ಮತ್ತು ಆಡಳಿತ ಕೇಂದ್ರ. ಇದು ಆಂಧ್ರ ಪ್ರದೇಶದ ಗಡಿ ಹತ್ತಿರ ಇರುವ ಊರು. ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಲಾರದ ಪೂರ್ವಕ್ಕೆ 30 ಕಿ.ಮೀ ದೂರದಲ್ಲಿದೆ. ಜನಸಂಖ್ಯೆ 44,031 (2001). ಮುಳಬಾಗಿಲು ತಾಲೂಕು 823 ಚದರ ಕಿ.ಮೀ.ಗಳ (82,246 ಹೆಕ್ಟೇರುಗಳು) ವಿಸ್ತೀರ್ಣ ಹೊಂದಿದೆ. ತಾಲೂಕು ಪೂರ್ವ ಅಕ್ಷಾಂಶ 78'12 ರಿಂದ 78'35 ಹಾಗೂ ಉತ್ತರ ರೇಖಾಂಶವು 13'01 ರಿಂದ 13'22 ಡಿಗ್ರಿ:ನಿಮಿಷಗಳಲ್ಲಿದೆ. ತಾಲೂಕಿನಲ್ಲಿ ಒಟ್ಟು 343 ಗ್ರಾಮಗಳಿದ್ದು ಅವುಗಳಲ್ಲಿ 314 ಜನವಸತಿ ಗ್ರಾಮಗಳಾಗಿವೆ. ಜನವಸತಿ ಇಲ್ಲದ (ಬೇಚಾರಕ್) 29 ಗ್ರಾಮಗಳಿವೆ. ಈ ಎಲ್ಲ ಗ್ರಾಮಗಳನ್ನು 30 ಗ್ರಾಮ ಪಂಚಾಯಿತಿ ಮತ್ತು ಐದು ಹೋಬಳಿಗಳಾದ ದುಗ್ಗಸಂದ್ರ, ಬೈರಕೂರು, ತಾಯಲೂರು, ಆವನಿ, ಮುಳಬಾಗಿಲು ಹಂಚಲಾಗಿದೆ. ಮುಳಬಾಗಿಲು ಬೆಂಗಳೂರಿನಿಂದ ಸುಮಾರು 100 ಕಿ.ಮೀ. ದೂರದಲ್ಲಿರುವ ಈ ಊರು, ಕರ್ನಾಟಕ–ಆಂಧ್ರ ಪ್ರದೇಶ ಸರಹದ್ದಿಗೆ 17ಕಿ.ಮಿ. ಪಶ್ಚಿಮಕ್ಕಿದೆ. ವಾಯುವ್ಯ ಮತ್ತು ಪಶ್ಚಿಮದಲ್ಲಿ ಶ್ರೀನಿವಾಸಪುರ, ದಕ್ಷಿಣದಲ್ಲಿ ಬಂಗಾರಪೇಟೆ, ಪಶ್ಚಿಮಕ್ಕೆ ಕೋಲಾರ ತಾಲೂಕುಗಳು ಉತ್ತರ ಮತ್ತು ಪೂರ್ವದಲ್ಲಿ ಆಂಧ್ರ ಪ್ರದೇಶವೂ ಸುತ್ತುವರಿದಿವೆ.

**ಐತಿಹಾಸಿಕ ಹಿನ್ನೆಲೆ**

ಮುಳಬಾಗಿಲನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ಮಾಡಿದಂತಹ ಪ್ರಮುಖ ಯಾವುದೇ ರಾಜ ಮನೆತನ ಇಲ್ಲ ಆದರೆ ದಕ್ಷಿಣ ಕರ್ನಾಟಕವನ್ನು ವಿಶೇಷವಾಗಿ ಕೋಲಾರವನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ಮಾಡಿದಂತಹ ಅನೇಕ ರಾಜ ಮನೆತನಗಳನ್ನು ಕಾಣಬಹುದು. ಅಂತಹ ಪ್ರಮುಖ ರಾಜರು

[1] ಶಿವಪ್ಪ ಜಿ. ಅರಿವು : ಮುಳಬಾಗಿಲು ತಾಲೂಕು ಚರಿತ್ರೆ ಮತ್ತು ಸಂಸ್ಕೃತಿ. ಎಸ್&ಎಸ್ ಪಬ್ಲಿಕೇಷನ್ಸ್, ಚಂದ್ರ ಲೇಔಟ್, ಬೆಂಗಳೂರು 2012. ಪುಟ ಸಂಖ್ಯೆ–01

ಮುಳಬಾಗಿಲಿನಲ್ಲಿ ಅಧೀನ ಪ್ರಾಂತ್ಯವಾಗಿ ಆಳ್ವಿಕೆಗೆ ಒಳಪಡಿಸಿಕೊಂಡಿರುತ್ತಾರೆ. ಶಾಸನಗಳಲ್ಲಿ ಉಲ್ಲೇಖಿಸಿರುವಂತೆ ಅನೇಕ ರಾಜ ಮನೆತನಗಳ ಆಳ್ವಿಕೆಗೆ ಮುಳಬಾಗಿಲು ಪ್ರಾಂತ್ಯವು ಸಹ ಒಳಪಟ್ಟಿರುವ ಮಾಹಿತಿ ದೊರೆಯುತ್ತದೆ. ಅಷ್ಟೇ ಅಲ್ಲದೆ ಅವರು ಸ್ಥಳೀಯ ಪ್ರಾಂತ್ಯದ ಅಭಿವೃದ್ಧಿಗಾಗಿ ಕೈಗೊಂಡ ದಾನ ದತ್ತಿಗಳು, ಸ್ಥಳೀಯ ಸರ್ಕಾರ, ನೀರಾವರಿ ಅಭಿವೃದ್ಧಿ, ಶಿಕ್ಷಣದ ವ್ಯವಸ್ಥೆ, ತೆರಿಗೆಗಳು, ಯುದ್ಧಗಳು, ಧರ್ಮ, ದೇವಾಲಯಗಳ ನಿರ್ಮಾಣಗಳ ಮಾಹಿತಿ ತಿಳಿಯಬಹುದು. ಅಂತಹ ಪ್ರಮುಖ ಅರಸು ಮನೆತನಗಳೆಂದರೆ,

**ಬಾಣರು**

ಬಾಣ ರಾಜಮನೆತನಕ್ಕೆ ಸಂಬಂಧಿಸಿದಂತೆ ಈವರೆಗೆ ಸುಮಾರು 30 ಶಾಸನಗಳು ಜಿಲ್ಲೆಯ ಕೋಲಾರ, ಮುಳಬಾಗಿಲು. ಚಿಂತಾಮಣಿ, ಬಂಗಾರಪೇಟೆ ಹಾಗೂ ಶ್ರೀನಿವಾಸಪುರ ತಾಲೂಕುಗಳಲ್ಲಿ ಪತ್ತೆಯಾಗಿವೆ. ಸುಮಾರು 750 ರಿಂದ 965ರ ಕಾಲಾವಧಿಗೆ ಸೇರಿದ ಈ ಶಾಸನಗಳಿಂದ ಜಿಲ್ಲೆಯ ಮೇಲಾದ ಬಾಣರಸರ ಆಡಳಿತದ ಪ್ರಭಾವವನ್ನು ಅರಿಯಬಹುದಾಗಿದೆ. [2] ಮುಳಬಾಗಿಲು ತಾಲೂಕಿನ ಮುದಿಯನೂರು ತಾಮ್ರಶಾಸನದ ಕಾಲ ಶಕ 261 ಎಂದು ಶಾಸನದಲ್ಲಿ ತಪ್ಪಾಗಿ ಉಲ್ಲೇಖಿಸಲ್ಪಟ್ಟಿದೆ. ಈ ಶಾಸನದಲ್ಲಿ ಬಾಣರ ವಂಶಾವಳಿಯನ್ನು ದಾನವ ಚಕ್ರವರ್ತಿ ಮಹಾಬಲಿಯೊಂದಿಗೆ ಆರಂಭಿಸಲಾಗಿದ್ದು, [3] ಆ ವಂಶದವನಾದ ನಂದಿವರ್ಮನು ಆಳಿದ ನಂತರ, ಅವನ ಮಗನಾದ ವಿಜಯಾದಿತ್ಯನ ಶೌರಯುಕ್ತ ಆಳ್ವಿಕೆಯ ಹಿಂದೆಯೇ ಬಾಣ ಸಿಂಹಾಸನವನ್ನು ಅಲಂಕರಿಸಿದ ವಧುವಲ್ಲಭ ಮಲ್ಲದೇವ ನಂದಿವರ್ಮನು ಆಂಧ್ರಮಂಡಲದೊಳಗಿದ್ದ 12,000 (ವಡುಗವಳಿ 12,000) ಗ್ರಾಮಗಳನ್ನೊಳಗೊಂಡ ಏಳೂವರೆ ಲಕ್ಷ ನಾಡನ್ನು (ಸಪ್ತಾರ್ಧ ಲಕ್ಷ ವಿಷಯ) ಆಳುತ್ತಿದ್ದ ಅವನು, ತನ್ನ ಆಳ್ವಿಕೆಯ 23ನೆಯ ವರ್ಷದಲ್ಲಿ ಆವಣಿಪುರದಲ್ಲಿ ತಂಗಿದ್ದಾಗ, ವಿವಿಧ ಗೋತ್ರಕ್ಕೆ ಸೇರಿದ 25 ವಿಪ್ರೋತ್ತಮರಿಗೆ ಹೊದಲಿ ವಿಷಯದಲ್ಲಿದ್ದ ಮುಡಿಯನೂರು (ಸಂಸ್ಕೃತ ರೂಪ ಚೂಡಗ್ರಾಮ) ಗ್ರಾಮವನ್ನು ಸರ್ವಮಾನ್ಯವಾಗಿ ದಾನಬಿಟ್ಟ ಅಂಶವನ್ನೂ ದಾಖಲಿಸಿದೆ. [4] ಮಿಗಿಲಾಗಿ ಬಾಣರಾಜ ಮಲ್ಲದೇವ ನಂದಿವರ್ಮನನ್ನು ಈ ಶಾಸನವು ಸಕಲ ಜೀವಾತ್ಮಗಳಿಗೆ ಲೇಸ ಬಯಸುವಲ್ಲಿ ಬೋಧಿಸತ್ವನಿಗೂ, ಶೌಲ್ಯದಲ್ಲಿ ವೀರಭದ್ರನಿಗೂ, ರಾಜ್ಯ ನಿರ್ವಹಣೆಯಲ್ಲಿ ಮಹೇಂದ್ರನಿಗೂ ಸಮಾನನಾಗಿದ್ದನೆಂದೂ ಉತ್ಪ್ರೇಕ್ಷೆಯಿಂದ ಹೊಗಳಿದೆ.

**ಇಮ್ಮಡಿ ವಿಜಯಾದಿತ್ಯ ಪ್ರಭು ಮೇರು**[5]

ಇಮ್ಮಡಿ ವಿಜಯದಿತ್ಯ ಪ್ರಭು ಮೇರು ಸುಮಾರು 895 ರಿಂದ 916 ತನ್ನ ಅಧಿಕಾರ ಅವಧಿಯಲ್ಲಿ ಇವರು ರಾಷ್ಟ್ರಕೂಟರ ಸಾಮಂತನಾಗಿ ಚೋಳರ ಮೇಲಿನ ಯುದ್ಧಗಳಲ್ಲಿ ಭಾಗವಹಿಸಿದನು ಮುಳಬಾಗಿಲು ತಾಲೂಕು ತಾಲೂಕಿನ ಮನಿಗಟ್ಟ ಮಣಿ ಕಟ್ಟ ಗೊಲ್ಲರಹಳ್ಳಿಯಲ್ಲಿರುವ 1909ರ ವೀರಗಲು ಶಾಸನವು

---

[2] ಚಿತ್ತರಂಜನ್ ಹೆಚ್ : ಕೋಲಾರ ಜಿಲ್ಲಾ ಗ್ಯಾಜಿಟಿಯರ್. 8ನೇ ಮಹಡಿ, ಜಲಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು. 2005 ಪುಟ ಸಂಖ್ಯೆ–56

[3] ಟಿ.ವಿ.ಮಹಾಲಿಂಗಂ, 'ದ ಬನಾಸ್ ಇನ್ ಸೌತ್ ಇಂಡಿಯನ್ ಹಿಸ್ಟರಿ', ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ, 1951, ಪಿ 157.

[4] ಪಿ.ವಿ. ಕೃಷ್ಣಮೂರ್ತಿ 'ಬಾಣರಸರ ಶಾಸನಗಳು ಒಂದು ಅಧ್ಯಯನ' ಸಿ.ವಿ.ಜಿ ಪಬ್ಲಿಕೇಷನ್ಸ್ ಬೆಂಗಳೂರು, ಪು. 15 & 27

[5] ಚಿತ್ತರಂಜನ್ ಹೆಚ್ : ಕೋಲಾರ ಜಿಲ್ಲಾ ಗ್ಯಾಜಿಟಿಯರ್. 8ನೇ ಮಹಡಿ, ಜಲಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು. 2005 ಪುಟ ಸಂಖ್ಯೆ–57

ಬೀಜಯಿತ ಬಾಣರಸನ ಆಡಳಿತ ಅವಧಿಯಲ್ಲಿ ಕೇತಯ್ಯನು ಈ ಪಟ್ಟಣವನ್ನು ಆಳುತ್ತಿದ್ದಾಗ ಮಣಿಕಟ್ಟದ ಮಾಣಿಕ್ಯ, ಮ್ಯಾಂಡಿಮುದ್ದುಲಗೌಡನ ಮಗನಾದ ಕಸವಯ್ಯನು ಆಳರಸನ ಆದೇಶದಂತೆ ಮುಲ್ಕಾಡಿನಲ್ಲಿ ಕಾದಾಡುತ್ತಾ ಇಬ್ಬರನ್ನು ಕೊಂದು ತಾನು ಇಹಲೋಕ ತ್ಯಜಿಸಿದನೆಂದು ಅದಕ್ಕಾಗಿ ಅವನ ವಂಶಸ್ಥರಿಗೆ ಕಂಡು ಗಬ್ಬುಮಿಯನ್ನು ಖಂಡುಗ ಭೂಮಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಈ ಆಧಾರದ ಮೇರೆಗೆ ಮುಳುಬಾಗಿಲು ಪ್ರಾಂತ್ಯವು ಬಾಣರ ಅರಸರುಗಳ ಅಧೀನಕ್ಕೆ ಒಳಪಟ್ಟಿತ್ತು ಎಂಬುದು ತಿಳಿದು ಬರುತ್ತದೆ.

**ತಲಕಾಡಿನ ಗಂಗರು**

ಕರ್ನಾಟಕದ ಇತಿಹಾಸದಲ್ಲಿ 'ತಲಕಾಡಿನ ಗಂಗರು' ಎಂದು ಪ್ರಸಿದ್ಧವಾಗಿರುವ ಈ ರಾಜಮನೆತನದ ಆರಂಭದ ರಾಜಕೀಯ ಹೆಜ್ಜೆಗಳು ಕೋಲಾರ ಜಿಲ್ಲೆಯಿಂದಲೇ ಪ್ರಾರಂಭಗೊಂಡಿತೆಂಬುದನ್ನು. ಈ ಮನೆತನದ ಆಳರಸರು ಧರಿಸಿದ್ದ 'ನಂದಗಿರಿನಾಥ' ಹಾಗೂ 'ಕುವಳಾ(ಲಾ)ಲಪುರವರಾಧೀಶ್ವರ" ಎಂಬ ಬಿರುದುಗಳು ಸ್ಪಷ್ಟಪಡಿಸಿದ್ದು, ಅವು ಕ್ರಮವಾಗಿ ಇಂದಿನ ನಂದಿಬೆಟ್ಟ ಹಾಗೂ ಜಿಲ್ಲಾ ಕೇಂದ್ರ ಕೋಲಾರಗಳಿಗೆ ಅವರು ನೀಡಿದ್ದ ರಾಜಕೀಯ ಪ್ರಾಮುಖ್ಯತೆಯ ಹಿನ್ನೆಲೆಯಲ್ಲಿ ರೂಪುಗೊಂಡು ಬಳಕೆಗೆ ಬಂದ ಪ್ರಮುಖ ಬಿರುದುಗಳಾಗಿವೆ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಗಂಗ ಒಂದನೆಯ ಮಾಧವನು, ಸೋದರ ದಡಿಗನೊಡಗೂಡಿ ಕೋಲಾರ ಪ್ರದೇಶವನ್ನಾಳುತ್ತಿದ್ದ ಬಾಣರ ಮೇಲೇರಿ ಹೋಗಿ ಅವರ ಮೇಲೆ ಗೆಲುವು ಸಾಧಿಸುವ ಮೂಲಕ 'ಬಾಣಕುಲಾಂತಕ' ಎಂಬ ಬಿರುದನ್ನು ಧರಿಸದನೆಂದು ಟಿ.ವಿ.ಮಹಾಲಿಂಗಂ ಅವರು ಹೇಳುತ್ತಾ, ಇವನು ಬಾಣರ ಮೇಲೆ ಕಾಡ್ತಿಚ್ಚಿನೋಪಾದಿಯಲ್ಲಿ ಏರಿ ಹೋಗಿ ಗೆಲುವು ಸಾಧಿಸಿದನೆಂದು ಹೇಳುತ್ತಾ, ನೆರೆಯದೊಡ್ಡಬಳ್ಳಾಪುರ ತಾಲೂಕಿನ ಶಾಸನವೊಂದನ್ನು ಉಲ್ಲೇಖಿಸುತ್ತಾರೆ ಗಂಗರಿಂದ ಸೋಲಿಸಲ್ಪಟ್ಟ ಬಾಣರು ಕೋಲಾರ ಪ್ರಾಂತದಿಂದ ಉತ್ತರದತ್ತ ಕಾಖೆಗೆದು ತಿರುಮಲ ವಿಷಯ (ಇಂದಿನ ಅನಂತಪುರ ಪ್ರದೇಶ)ದಲ್ಲಿ ಅಧಿಕಾರ ಮುಂದುವರಿಸಿದರೆಂದು ಟಿ.ವಿ. ಮಹಾಲಿಂಗಂ, ಎಂ.ಆರೋಗ್ಯಸ್ವಾಮಿ ಮುಂತಾದವರು ಅಭಿಪ್ರಾಯಪಡುತ್ತಾರೆ.

**ಮಾಧವ II (370–390)[6]**

ಒಂದನೆಯ ಮಾಧವನಿಗೆ ಮಕ್ಕಳಿಲ್ಲದ ಕಾರಣ ಅವನ ಸೋದರ ದಡಿಗನ ಮಗನಾದ ಇಮ್ಮಡಿ ಮಾಧವನು ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯು ಶಾಂತಿಯುತವಾಗಿದ್ದು, ಪ್ರಜಾಕಲ್ಯಾಣಕ್ಕೆ ಇವನು ವಿಶೇಷ ಗಮನ ನೀಡಿದ್ದ ಅಂಶ, ನಂದಿ ತಾಮ್ರಶಾಸನದಿಂದ (ಕೂಟ) ಗೊತ್ತಾಗುತ್ತದೆ. ಸಾಹಿತ್ಯಾಭಿಮಾನಿಯಾದ ಇವನು ನೀತಿಶಾಸ್ತ್ರ ಪಾರಂಗತನಿದ್ದು, ದತ್ತಕಸೂತ್ರಕ್ಕೆ ಟೀಕೆ ಬರೆದಿದ್ದನೆಂದು ತಿಳಿದುಬರುತ್ತದೆ. ಗುರು–ಗೋಬ್ರಾಹ್ಮಣರ ಆರಾಧಕನಾಗಿದ್ದ ಇವನು, ಅನುಯಾಯಿಗಳಿಗೆ ಕಲ್ಪವೃಕ್ಷದಂತಿದ್ದನೆಂದು ತಿಳಿದುಬರುತ್ತದೆ. ಆದರೆ ಇವನ ಕಾಲಕ್ಕೆ ಸೇರಿದ ಶಾಸನಗಳಾವುದೂ ಜಿಲ್ಲೆಯಿಂದ ವರದಿಯಾಗಿಲ್ಲ. ಆದರೆ ಹರಳಕುಂಟೆಯ ಊರಾಚೆ ನಾರಾಯಣಸ್ವಾಮಿಯವರ ಹೊಲದಲ್ಲಿ ಇದ್ದಿತ್ತೆಂದು

[6] ಚಿತ್ತರಂಜನ್ ಹೆಚ್ : ಕೋಲಾರ ಜಿಲ್ಲಾ ಗ್ಯಾಜಿಟಿಯರ್. 8ನೇ ಮಹಡಿ, ಜಲಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು. 2005 ಪುಟ ಸಂಖ್ಯೆ–64

ಹೇಳಲಾಗುವ ಅವಶೇಷಗಳು, ಬೌದ್ಧ ವಿಹಾರಗಳ ಅವಶೇಷವಾಗಿರುವ ಸಾಧ್ಯತೆಯು ಅನುಮಾನಾಸ್ಪದವೆಂಬ ಅಂಶವನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಕುರುಡುಮಲೆಯಿಂದ ಬೌದ್ಧಶಿಲ್ಪವೊಂದನ್ನು ಬಹು ಹಿಂದೆಯೇ ಆರ್. ನರಸಿಂಹಾಚಾರ್ ವರದಿಮಾಡಿದ್ದಾರೆ.

**ವಿಷ್ಣುಗೋಪ (410–430):**

ಹರಿವರ್ಮನ ಪುತ್ರನಾದ ಇವನು ಸುಮಾರು 410ರಲ್ಲಿ ಸಿಂಹಾಸನವನ್ನು ಏರಿದನು. ಗುರು–ಗೋಬ್ರಾಹ್ಮಣರ ಆರಾಧನೆಗೆ ಪ್ರಖ್ಯಾತನಾಗಿದ್ದ ಇವನ ಉಲ್ಲೇಖ ಜಿಲ್ಲೆಯ ಗುಮ್ಮರೆಡ್ಡಿಪುರ ತಾಮ್ರಶಾಸನ ಮುಳಬಾಗಿಲು ಹಾಗೂ ಆವನಿ ಶಿಲಾ ಶಾಸನಗಳೂ ಸೇರಿದಂತೆ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಇವನ ಆಳ್ವಿಕೆಯೂ ಶಾಂತಿಯುತವಾಗಿದ್ದು ಈ ಅವಧಿಯಲ್ಲಿ ಗಂಗರ ಪರವಿ ಹಾಗೂ ಕೈವಾರ ಶಾಖೆಗಳು ಸ್ವತಂತ್ರವಾಗಿ ರಾಜ್ಯಭಾರ ನಡೆಸುತ್ತಿದ್ದವು. ಗಂಗವಂಶದ ಆಡಳಿತದಲ್ಲಿ ಮುಳಬಾಗಿಲು ಧಾರ್ಮಿಕ ಮತ್ತು ಆಡಳಿತ ಕೇಂದ್ರವಾಗಿ ಬೆಳೆದಿತು. ಜೈನ ಧರ್ಮಕ್ಕೆ ನೀಡಿದ ಆಶ್ರಯ, ಬಸದಿಗಳ ನಿರ್ಮಾಣ ಮತ್ತು ಶಾಸನಗಳ ಮೂಲಕ ಗಂಗರ ಪ್ರಭಾವ ಸ್ಪಷ್ಟವಾಗುತ್ತದೆ.

**ಇಮ್ಮಡಿ ಶಿವಮಾರ (788–812):**

ಸೈಗೊಟ್ಟ ಶಿವಮಾರನೆಂದೂ ಪ್ರಸಿದ್ಧನಾಗಿದ್ದ ಇವನು ಶ್ರೀಪುರುಷನ ಐವರು ಮಕ್ಕಳಲ್ಲಿ ಒಬ್ಬನಾಗಿದ್ದು, ಸಿಂಹಾಸನಕ್ಕಾಗಿ ಎದುರಾದ ಅಂತಃಕಲಹದಲ್ಲಿ ಸೋದರರನ್ನು ಹತ್ತಿಕ್ಕಿ 788ರಲ್ಲಿ ಗಂಗ ಸಿಂಹಾಸನವನ್ನೇರಿದನು. ಸ್ವತಃ ಪಂಡಿತನಾಗಿದ್ದ ಇವನು ಕನ್ನಡದಲ್ಲಿ 'ಗಜಾಷ್ಟಕಂ' ಎಂಬ ಗಜಶಾಸ್ತ್ರ ಗ್ರಂಥವನ್ನು ರಚಿಸಿದ್ದಾನೆ. ಅಲ್ಲದೇ 'ಸೇತು ಬಂಧ' ಗ್ರಂಥದ ಕರ್ತೃವೂ ಹೌದು. ಇಮ್ಮಡಿ ಶಿವಮಾರನ ಇನ್ನೊಬ್ಬ ಮಗ ಒಂದನೆಯ ಪೃಥ್ವಿಪತಿಯು ಅಪ್ರಾಪ್ತನಿದ್ದ ಕಾರಣ, ಶಿವಮಾರನ ಕಿರಿಯ ಸೋದರ ವಿಜಯಾದಿತ್ಯನ ಕಿರಿಯ ಮಗನಾದ ಒಂದನೆಯ ಸತ್ಯವಾಕ್ಯ ರಾಚಮಲ್ಲನು 816ರಲ್ಲಿ ಗಂಗ ಸಿಂಹಾಸನವನ್ನು ಏರಿದನು.

**ರಾಷ್ಟ್ರಕೂಟರು**

ಕರ್ನಾಟಕವನ್ನು ಆಳಿದ ಚಕ್ರಾಧಿಪತ್ಯಗಳಲ್ಲಿ ರಾಷ್ಟ್ರಕೂಟರ ಸಾರ್ವಭೌಮಾಡಳಿತ ಒಂದು ಮೈಲಿಗಲ್ಲು.[7] ಮಾಳಖೇಡವು ಇವರ ರಾಜಧಾನಿ ಪಟ್ಟಣವಾಗಿದ್ದು ನೇಗಿಲು ಅವರ ರಾಜಲಾಂಛನವಾಗಿತ್ತು. ಈ ಮನೆತನಕ್ಕೆ ಸೇರಿದ ಒಂದನೆಯ ಕೃಷ್ಣ, ಅಮೋಘವರ್ಷ ನೃಪತುಂಗ, ಮುಮ್ಮಡಿ ಕೃಷ್ಣರಂತಹ ಆಳರಸರು ಉತ್ತರಭಾರತಕ್ಕೂ ದಿಗ್ವಿಜಯ ಕೊಂಡೊಯ್ದು ಪರಿಣಾಮವಾಗಿ ಉತ್ತರ ಭಾರತದ ಪ್ರಮುಖ ರಾಜಧಾನಿ ಕನೂಜಿನ ಮೇಲೂ ಇವರು ಸ್ವಲ್ಪ ಕಾಲ ಅಧಿಪತ್ಯ ಸ್ಥಾಪಿಸಿದ್ದು ಗಮನಾರ್ಹಜಿಲ್ಲೆಯಿಂದ ಈವರೆಗೆ ವರದಿಯಾಗಿರುವ ರಾಷ್ಟ್ರಕೂಟರ ಕಾಲದ ಏಕೈಕ ಶಾಸನವು ಮಾಲೂರು ತಾಲೂಕಿನ ಶಿವಾರ (ಕಸಬಾ ಹೋಬಳಿ)ದಲ್ಲಿ ಪತ್ತೆಯಾಗಿವೆ. ಆದರೂ ಈ ಶಾಸನದ ಕಾಲಕ್ಕಾಗಲೇ ಗಂಗ ಇಮ್ಮಡಿ ಬೂತುಗನು

[7] ಚಿತ್ತರಂಜನ್ ಹೆಚ್ : ಕೋಲಾರ ಜಿಲ್ಲಾ ಗ್ಯಾಜಿಟಿಯರ್. 8ನೇ ಮಹಡಿ, ಜಲಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು. 2005 ಪುಟ ಸಂಖ್ಯೆ–74

ಮುಮ್ಮಡಿ ಕೃಷ್ಣನ ನಿಕಟವರ್ತಿಯಾಗಿದ್ದ ಅಂಶ ಅವನ ಆತಕೂರು ಶಾಸನದಿಂದ ವೇದ್ಯವಾಗುತ್ತದೆ. ಆ ಶಾಸನದ ಹಿನ್ನೆಲೆಯಲ್ಲಿ ಶಿವಾರದ ಈ ವೀರಗಲ್ಲು ಶಾಸನವನ್ನು ಪರಿಶೀಲಿಸುವ ಅಗತ್ಯವಿದೆ.

**ಹೆಂಡೇರಿನ ನೊಳಂಬರು**

ಸುಮಾರು ಎಂಟನೆಯ ಶತಮಾನದ ಮಧ್ಯಭಾಗದಿಂದ 11ನೆಯ ಶತಮಾನದವರೆಗೆ ಕೋಲಾರ ಜಿಲ್ಲಾ ಪ್ರದೇಶವೂ ಸೇರಿದಂತೆ ಕರ್ನಾಟಕ–ಆಂಧ್ರ ರಾಜ್ಯಗಳ ಕೆಲವು ಪ್ರದೇಶಗಳನ್ನೊಳಗೊಂಡ ನೊಳಂಬವಾಡಿ–32,000ದ ಮೇಲೆ ಅಧಿಪತ್ಯವನ್ನು ಹೊಂದಿದ್ದ ನೊಳಂಬರು, ರಾಜಧಾನಿ ಹೆಂಜೇರು (ಹೇಮಾವತಿ) ಪಟ್ಟಣದಿಂದ ರಾಜ್ಯಭಾರ ಮಾಡುತ್ತಿದ್ದರು.

**ನೊಳಂಬಾಧಿರಾಜ ಮಹೇಂದ್ರ (ಸು.870–897)[8]:**

ಒಂದನೆಯ ಪೊಳಲ್ಲೋರ ಹಾಗೂ ಗಂಗ ಜಯಭೆಯರ ಮಗನಾದ ಇವನು ಗಂಗ ಅರಸ ಒಂದನೆಯ ಎರೆಯಂಗ ನೀತಿಮಾರ್ಗನ ಸೋದರಳಿಯನೂ ಆಗಿದ್ದು. ಬರಗೂರು (ತುಮಕೂರು ಜಿ.) ಹಾಗೂ ಹೇಮಾವತಿ (ಆನಂತಪುರ ಜಿ. ಯ 878ರ ಶಾಸನಗಳೇ ಈತನ ಕಾಲದ ಪ್ರಾಚೀನ ಶಾಸನಗಳಾಗಿವೆ.ಇವನ ಕಾಲಕ್ಕೆ ಸೇರಿದ ಮುಳಬಾಗಿಲು ತಾಲೂಕಿನ ಮೋತಕಪಲ್ಲಿಯ ಸುಮಾರು 885ರ ಶಾಸನದಿಂದ ಪಲ್ಲವರು ಹಾಗೂ ಪರವಿ ಗಂಗ ಒಂದನೆಯ ಪೃಥ್ವಿಪತಿ, ಸಂಯುಕ್ತವಾಗಿ ಪಾಂಡ್ಯರೊಂದಿಗೆ ಯುದ್ಧದಲ್ಲಿ ತೊಡಗಿದ್ದಾಗ ತೆಲುಗು ಚೋಡರ ಮೈದಡಿಯರಸರ ಆಳಾದ ಆರುಂಬರಗಂಡನು ಹೋರಾಡುತ್ತಾ ಮಡಿದ ಅಂಶವನ್ನು ದಾಖಲಿಸುತ್ತಾ, ತಾಯಲೂರು ಕೆರೆ ಕೆಳಗಿನ ಗದ್ದೆಯನ್ನು ಕಲ್ನಾಟಾಗಿ ದಾನ ಬಿಟ್ಟ ಅಂಶವನ್ನೂ ದಾಖಲಿಸಿದೆ. ನೊಳಂಬ ಮಹೇಂದ್ರನು, ಬಾಣರಸರ ಆಧೀನ ಪ್ರದೇಶವಾದ ಪುಲಿನಾಡಿಗೂ ಮುತ್ತಿಗೆ ಹಾಕಿ, ಅದನ್ನು ವಶಪಡಿಸಿಕೊಂಡ ಅಂಶ ಬೇರೆ ಶಾಸನದಿಂದ ಗೊತ್ತಾಗುತ್ತದೆ.

**ನನ್ನಿನೊಳಂಬ (ಸು.969–975):**

ದಿಲೀಪನ ಮಗನಾದ ಇವನಿಗೆ 'ಛಲದಂಕಕಾರ' ಎಂಬ ಬಿರುದಿದ್ದು ಇವನು ಯುವರಾಜನಾಗಿ ಕೋಲಾರ ಪ್ರಾಂತವನ್ನು ಆಳುತ್ತಿದ್ದ ಅಂಶ ಉತ್ತನೂರಿನ 969ರ ಶಾಸನದಿಂದ ವೇದ್ಯವಾಗುತ್ತದೆ. ತಂದೆಯ ಮರಣಾನಂತರ ಇವನು ಅಧಿಕಾರಕ್ಕೆ ಬಂದನು. ಇವನ ಮಂತ್ರಿಯಾಗಿದ್ದ ಬಸವಯ್ಯನು ಮುಳಬಾಗಿಲು ತಾಲೂಕಿನ ಆವನಿಯಲ್ಲಿ ಮಾನಸ್ತಂಭವನ್ನು ನಿಲ್ಲಿಸಿದ ಅಂಶ ಅದರ ಮೇಲಿರುವ ಶಾಸನದಿಂದ ವೇದ್ಯವಾಗುತ್ತದೆ. 'ಕಟ್ಟಾನೆಮಲ್ಲ' 'ಗಜರಾಜಮಲ್ಲ' ಮುಂತಾದ ಬಿರುದುಗಳನ್ನು ಹೊಂದಿದ್ದ ಇವನು ಗಂಗಾರುಸಾಸಿರ ನಾಡನ್ನು ಆಳುತ್ತಿದ್ದ ಅಂಶ, ಚಳ್ಳಕೆರೆ ತಾಲೂಕಿನ ಚಿಕ್ಕಮಧುರೆ ಶಾಸನದಿಂದ ಗೊತ್ತಾಗುತ್ತದೆ.

**ವೈದುಂಬರರು**

ಸುಮಾರು 10–11ನೆಯ ಶತಮಾನದಲ್ಲಿ ಜಿಲ್ಲೆಯ ಭಾಗಶಃ ವೈದುಂಬ ರಾಜಮನೆತನದ ಆಳ್ವಿಕೆಗೆ ಒಳಪಟ್ಟಿದ್ದ ಅಂಶ, ಜಿಲ್ಲೆಯ ಬಂಗಾರಪೇಟೆ, ಮುಳಬಾಗಿಲು, ಚಿಂತಾಮಣಿ ಹಾಗೂ ಬಾಗೇಪಲ್ಲಿ

[8] ಅಡಿಟಿಪ್ಪಣಿ–7, ಪುಟ ಸಂಖ್ಯೆ–75

ತಾಲೂಕುಗಳಲ್ಲಿ ಲಭಿಸಿರುವ ಅವರ ಶಾಸನಗಳಿಂದ ವೇದ್ಯವಾಗುತ್ತದೆಮುಳಬಾಗಿಲು ತಾಲೂಕಿನ ಶಾಸನವೊಂದರಲ್ಲಿ ತಿರುವಯ್ಯನ ಮಗ ಚಂದ್ರಶೇಖರನ ಪ್ರಸ್ತಾಪವಿದೆ.

**ತಂಜಾವೂರಿನ ಚೋಳರು**

ಒಂದನೆಯ ಪರಾಂತಕ (907–47)ನ ಆಳ್ವಿಕೆಗೆ ಸೇರಿದ ಸುಮಾರು 915ರ ಶಾಸನವೊಂದರಿಂದ ಇವನು ಬಾಣ ಹಾಗು ವೈದುಂಬರನ್ನು ಸೋಲಿಸಿದ ಅಂಶ ಗೊತ್ತಾಗುತ್ತದೆ. ಇದೇ ಅರಸನ ಆಳ್ವಿಕೆಯ 29ನೇ ವರ್ಷಕ್ಕೆ ಸೇರಿದ 936ರ ಶಾಸನವೊಂದು ಮುಳಬಾಗಿಲು ತಾಲೂಕಿನ ಬೈರಕೂರಿನಿಂದ ವರದಿಯಾಗಿದ್ದು, ಚೋಳರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಪತ್ತೆಯಾಗಿರುವ ಅತ್ಯಂತ ಪ್ರಾಚೀನ ಶಾಸನವಾಗಿದೆ. ಒಂದನೆಯ ಪರಾಂತಕ ಚೋಳ. ಇವನ ಆಳ್ವಿಕೆಯ 29ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಮುಳಬಾಗಿಲು ತಾಲೂಕಿನ ಬೈರಕೂರಿನ 936ರ ವೀರಗಲ್ಲು ಶಾಸನದಿಂದ, ಆ ವೇಳೆಗಾಗಲೇ, ಕೋಲಾರ ಜಿಲ್ಲೆಯ ಪೂರ್ವಭಾಗವು ಇವನ ಆಳ್ವಿಕೆಗೆ ಒಳಪಟ್ಟಿತ್ತೆಂದು ಭಾವಿಸಬಹುದಾಗಿದೆ.

**ಒಂದನೆಯ ರಾಜರಾಜ[9]**

ಸುಮಾರು 1000ದಲ್ಲಿ ನೀಡಲ್ಪಟ್ಟಿರುವ ಮೂರು ಶಾಸನಗಳು ಮುಳಬಾಗಿಲು ತಾಲೂಕಿನ ಹೆಬ್ಬಣಿಯಲ್ಲಿ ಪತ್ತೆಯಾಗಿವೆ. ಅವುಗಳಲ್ಲೊಂದರಲ್ಲಿ ನೊಳಂಬಾಧಿರಾಜನ ಪ್ರಸ್ತಾಪವಿರುವುದರಿಂದ, ನೊಳಂಬರು ಚೋಳರ ಪರಮಾಧಿಕಾರವನ್ನು ಒಪ್ಪಿದ್ದ ಅಂಶ ಸ್ಪಷ್ಟವಾಗುತ್ತದೆ. ಮುಳಬಾಗಿಲು ತಾಲೂಕಿನ ಉತ್ತನೂರಿನಲ್ಲಿ ಪತ್ತೆಯಾಗಿರುವ 1003ರ ಇನ್ನೊಂದು ಶಾಸನ, ರಾಜರಾಜನ ಎಲ್ಲಾ ದಿಗ್ವಿಜಯಗಳನ್ನು ಉಲ್ಲೇಖಿಸುತ್ತಿದ್ದು, ಗಂಗಾರುಸಾಸಿರದ ಪುದಲ್ನಾಡಿನೊಳಗಿದ್ದ ಉತ್ತನೂರ ಗುಡಿಗೆ ದಾನ ಬಿಟ್ಟಿದ್ದನ್ನು ದಾಖಲಿಸುತ್ತಿದ್ದು, ಗ್ರಾಮಕ್ಕೆ 'ಅರುಮೊಳೆದೇವ ಚತುರ್ವೇದ ಮಂಗಲ' ಎಂಬ ಹೆಸರಿದ್ದ ಉಲ್ಲೇಖವೂ ಇದೆ.

ಈ ಅವಧಿಯಲ್ಲಿ ಚೋಳ–ಪಲ್ಲವ ಸಮ್ಮಿಶ್ರ ಮೂಲದ ಮಾಂಡಲೀಕರು ಕೋಲಾರ ಜಿಲ್ಲೆಯ ಆವನಿ, ಟೇಕಲ್ ಹಾಗೂ ಕುರುಡುಮಲೈ ಭಾಗಗಳ ಮೇಲೆ ಹಿಡಿತವನ್ನು ಹೊಂದಿದ್ದರು. ಈ ಚೋಳ–ಪಲ್ಲವ ವಂಶಕ್ಕೆ ಸೇರಿದ ಮಾರಾಳ್ವಾರ್ ಬಗ್ಗೆ ಮುಳಬಾಗಿಲು ತಾಲೂಕಿನ ಅವನಿ (1222) ಶಾಸನ ಉಲ್ಲೇಖಿಸಿದರೆ, ಈ ವಂಶದ ಪ್ರಮುಖ ಅರಸನಾದ ಜಯಂಗೊಂಡ ಚೋಳ ಇಳವಂಜಿರಾಯನ ಉಲ್ಲೇಖ ಜಿಲ್ಲೆಯ ಕೋಲಾರ ಹಾಗೂ ಮುಳಬಾಗಿಲು ತಾಲೂಕಿನ ಶಾಸನಗಳಲ್ಲಿ ಕಂಡುಬರುತ್ತಿದ್ದು. ಮುಳಬಾಗಿಲು ತಾಲೂಕಿನ 1234ರ ಶಾಸನದಲ್ಲಿ ರಾಜಾಧಿರಾಜ ಮಹಾರಾಯನ ಉಲ್ಲೇಖವಿದ್ದು, ಮಹಾರಾಯ ವೀರಯ್ಯನ ಮಗನಾದ ಯಲವಂಜಿರಾಯನು ಮುಳಬಾಗಿಲಿನ ಸೋಮೇಶ್ವರ ದೇವಾಲಯವನ್ನು ಮನರ್ಜೀರ್ಣೋದ್ದಾರಗೊಳಿಸಿ ಉದಾರ ದಾನ ನೀಡಿದ ಅಂಶವನ್ನು ಅದು ತಿಳಿಸುತ್ತದೆ. ಮುಳಬಾಗಿಲು ತಾಲೂಕಿನ 1254ರ ಇನ್ನೊಂದು ಶಾಸನದಲ್ಲಿ ಕೂತ್ತಾಂಡಂದೇವನ ಮಗನಾದ ವಾಸುದೇವ ಇಲ್ಲವೇ ಜಯಂಗೊಂಡ ಜೋಳ ಇಳವಂಜಿರಾಯ ಮತ್ತವನ ಮಡದಿ ಶೆಟ್ಟಾಳ್ವಾರ್ಳ ಉಲ್ಲೇಖವಿದೆ. ಇವನು ಸ್ವತಂತ್ರವಾಗಿ ಆಳುತ್ತಿದ್ದು,

[9] ಅಡಿಟಿಪ್ಪಣಿ–7, ಪುಟ ಸಂಖ್ಯೆ–82

ಸುಮಾರು 1268ರ ಶಾಸನದಲ್ಲಿ ಇನ್ನೊಬ್ಬ ಕೂತ್ತಾಂಡನ ಆಡಳಿತದ ಉಲ್ಲೇಖವಿದ್ದು, 1269ರ ಶಾಸನದಲ್ಲಿ ಕಿರಿಯ ವಾಸುದೇವನ ಪ್ರಸ್ತಾಪವಿದೆ.

**ದ್ವಾರಸಮುದ್ರದ ಹೊಯ್ಸಳರು (ಸುಮಾರು 1006–1342)**

ಮೂಡಿಗೆರೆ (ಚಿಕ್ಕಮಗಳೂರು ಜಿಲ್ಲೆ) ತಾಲೂಕಿನ ಸೊಸೆಯೂರು (ಇಂದಿನ ಅಂಗಡಿ ಗ್ರಾಮ) ಹೊಯ್ಸಳರ ಮೂಲಸ್ಥಳವಾಗಿದ್ದು ಜೈನಯತಿ ಸುದತ್ತಮುನಿಗಳ ನಿರ್ದೇಶನದಲ್ಲಿ ವಾಸಂತಿಕಾ ದೇವಿಯ ಸನ್ನಿಧಿಯಲ್ಲಿ ಹುಲಿಯನ್ನು ಕೊಲ್ಲುವ ಮೂಲಕ 'ಹೊಯ್ಸಳನಾದ ಸಳ'ನು ಈ ಮನೆತನದ ಆಳ್ವಿಕೆಗೆ ನಾಂದಿ ಹಾಡಿದ ಘಟನೆಯನ್ನು ಹೊಯ್ಸಳರ ಶಾಸನಗಳು ಸಾಂಪ್ರದಾಯಿಕವಾಗಿ ಉಲ್ಲೇಖಿಸಿವೆ.[10] ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಚಿಕ್ಕಬಳ್ಳಾಪುರ ತಾಲೂಕಿನ 1135ರ ನಂದಿಯ ತಮಿಳು ಶಾಸನವು ಹೊಯ್ಸಳ ವಿಟ್ಟಿ (ವಿಷ್ಣುವರ್ಧನ) ಅರಸನನ್ನು 'ತಲೈಕಾಡುಗೊಂಡ'ನೆಂದು ಕರೆಯುತ್ತಾ, ನಂದಿಯ ತಿರುನಂದೀಶ್ವರ ದೇವರ ಸೇವೆಗೆಂದು ವಿಕ್ರಮಚೋಳ ಮಂಡಲದ ಚನ್ನೈ ನಾಡೊಳಗಣ ನೆಡುಮನೂರು ಗ್ರಾಮವನ್ನು ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ. ಈತನಿಗೆ 'ನಂಗ್ಲಲಿಗೊಂಡ' ಎಂಬ ಬಿರುದಿದ್ದು, "ನಂಗಲಿ' ಮುಳಬಾಗಿಲು ತಾಲೂಕಿನಲ್ಲಿರುವುದು ಗಮನಾರ್ಹ.

**ಇಮ್ಮಡಿ ನರಸಿಂಹ (1220–1236)**: ಇಮ್ಮಡಿ ನರಸಿಂಹನ ಆಳ್ವಿಕೆಯಲ್ಲಿ ಹೊಯ್ಸಳ ಸಾಮ್ರಾಜ್ಯವು ಕೋಲಾರ ಭಾಗದ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳಲಾರಂಭಿಸಿತು. ಈ ಅವಧಿಯಲ್ಲಿ ಜಯಂಗೊಂಡಚೋಳ ಮತ್ತವನ ಉತ್ತರಾಧಿಕಾರಿಗಳು ನೀಡಿರುವ ಶಾಸನಗಳು ಜಿಲ್ಲೆಯ ಮುಳಬಾಗಿಲು ಹಾಗೂ ಬಂಗಾರಪೇಟೆ ತಾಲೂಕುಗಳಲ್ಲಿ ಲಭಿಸಿವೆ. ಈ ಅವಧಿಯಲ್ಲಿ ಜಯಂಗೊಂಡ ಚೋಳ ಮತ್ತವನ ವಂಶಸ್ಥರು ಕೂಡು (ಕುರುಡು) ಮಲ್ಲೆ, ಬೇತಮಂಗಲ ಹಾಗೂ ಮಡಿವಾಳ ಪ್ರದೇಶಗಳಲ್ಲಿ ಸ್ವತಂತ್ರವಾಗಿ ರಾಜ್ಯಭಾರ ಮಾಡಿದರು.

**ವಿಜಯನಗರ ಸಾಮ್ರಾಜ್ಯ (1336–1646)**

ದಕ್ಷಿಣ ಭಾರತದ ಇತಿಹಾಸದಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಈ ಸಾಮ್ರಾಜ್ಯವು ಪ್ರಮುಖವಾಗಿ ನಾಲ್ಕು ರಾಜ ಮನೆತನಗಳು ಆಳ್ವಿಕೆ ಮಾಡಿದವು ಅದರಲ್ಲಿ ಮೊದಲನೇ ರಾಜಮನೆತನ ಸಂಗಮರು ಒಂದನೆಯ ಹರಿಹರನು (1336–1356), ವಿದ್ಯಾರಣ್ಯರ ಸೂಚನೆಯಂತೆ ರಾಜಧಾನಿ ವಿದ್ಯಾ(ವಿಜಯ)ನಗರ ಪಟ್ಟಣವನ್ನು ನಿರ್ಮಿಸಿದನೆಂದು ಅದು ತಿಳಿಸುತ್ತದೆ. ಇವನ ಸೋದರರನಾದ ಮುದ್ದಪ್ಪನನ್ನು ಮುಳಬಾಗಿಲಿಗೆ ರಾಜ್ಯಪಾಲನನ್ನಾಗಿ ನೇಮಿಸಲಾಗಿತ್ತು.[11] ವಿಜಯನಗರದರಸರ ಆಳ್ವಿಕೆಯಲ್ಲಿ ಇಂದಿನ ಮುಳಬಾಗಿಲು, ಮುಳವಾಯಿ ರಾಜ್ಯವೆಂದೇ ಪ್ರಸಿದ್ಧವಾಗಿದ್ದು, ಪ್ರಾಂತಾಧಿಕಾರಿಯ ಆಡಳಿತಕ್ಕೆ ಒಳಪಟ್ಟಿದ್ದ ಅಂಶ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ಮುಳವಾಯಿ ರಾಜ್ಯವು ಇಂದಿನ ಕೋಲಾರ ಜಿಲ್ಲೆಯ ಜೊತೆಗೆ ನೆರೆಯ ತಮಿಳುನಾಡಿನ ಸೇಲಂ, ಧರ್ಮಪುರಿ, ಉತ್ತರ ಹಾಗೂ ದಕ್ಷಿಣ ಆರ್ಕಾಟ್ ಜಿಲ್ಲೆಗಳನ್ನೂ ಒಳಗೊಂಡಿದ್ದು.

[10] ಅಡಿಟಿಪ್ಪಣಿ–7, ಪುಟ ಸಂಖ್ಯೆ–90
[11] ಅಡಿಟಿಪ್ಪಣಿ–7, ಪುಟ ಸಂಖ್ಯೆ–95

ಸಾಮಾನ್ಯವಾಗಿ ಯುವರಾಜರನ್ನು ಅದರ ಆಡಳಿತಕ್ಕೆ ನಿಯೋಜಿಸಲಾಗುತ್ತಿತ್ತು. ಹರಿಹರನ ಮಗನಾದ ಒಂದನೆಯ ಕಂಪಣನು 1351ರಲ್ಲೂ ಹಾಗೂ ಬುಕ್ಕನ ಮಗ ಇಮ್ಮಡಿ ಕಂಪಣನು 1356ರಿಂದ 1366ರವರೆಗೆ ಮುಳುವಾಯಿಯಿಂದಾಳುತ್ತಿದ್ದರು. ಇಮ್ಮಡಿ ಕಂಪಣನ ರಾಣಿಯಾದ ಗಂಗಾಂಬಿಕೆಯು ತನ್ನ ಗಂಡ ಕಂಪಣನು ಬುಕ್ಕರಾಯನ ಮುಂದಾಳತ್ವದಲ್ಲಿ ಮಧುರೈ ಸುಲ್ತಾನನ ಮೇಲೆ ಕೈಗೊಂಡ ದಿಗ್ವಿಜಯವನ್ನು ವರ್ಣಿಸುವ 'ವೀರ ಕಂಪಣರಾಯ ಚರಿತೆ' ಅಥವಾ 'ಮಧುರೆ ವಿಜಯಂ' ಎಂಬ ಕೃತಿಯನ್ನು ರಚಿಸಿದ್ದಾಳೆ.

### ಒಂದನೆಯ ದೇವರಾಯ (1406–1422)

ಇಮ್ಮಡಿ ಬುಕ್ಕನ ನಂತರ ಅವನ ಸೋದರ ಒಂದನೆಯ ದೇವರಾಯನು 1406ರಲ್ಲಿ ಅಧಿಕಾರಕ್ಕೆ ಬಂದನುಈತನ ಅಧಿಕಾರಾವಧಿಯಲ್ಲಿ ಅವನ ಮಗನಾದ ವೀರವಿಜಯರಾಯನು ಮುಳಬಾಗಿಲು ರಾಜ್ಯದ ಪ್ರಾಂತಾಧಿಕಾರಿಯಾಗಿದ್ದ ಅಂಶ ಅವನ 1408ರ ಶಾಸನವೊಂದರಿಂದ ಗೊತ್ತಾಗುತ್ತದೆ. ಮುಳುವಾಯಿಯ ನಾಚಿಯಾರಮ್ಮನ ಗುಡಿಯ ಪೂಜಾರಿಗಳು ಕೆಲವು ಬ್ರಾಹ್ಮಣರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಈ ಹಿಂದೆ ಪಾಲಾರ್ ನದಿಗೆ ನಿರ್ಮಿಸಿದ್ದ ಅರಳಿ ಅಣೆಯು ಹಾಳಾಗಿದ್ದು, ಅದನ್ನು ದುರಸ್ತಿಗೊಳಿಸಿ ಅಗ್ರಹಾರವನ್ನು ದೇವಿಯ ಹೆಸರಲ್ಲಿ ನಿರ್ಮಿಸಿ ಅದಕ್ಕೆ ತಗಲುವ ವೆಚ್ಚಕ್ಕಾಗಿ ಭೂದಾನವನ್ನು ನೀಡಿದ ಅಂಶವನ್ನು ಇದು ದಾಖಲಿಸಿದೆ. ಸುಮಾರು 1416ರಲ್ಲಿ ಮುಳುವಾಯಿ ರಾಜ್ಯವು ದೇವರಾಯನ ಮಂತ್ರಿ ದಂಡನಾಯಕ ನಾಗಣ್ಣನ ನಿಯಂತ್ರಣದಲ್ಲಿದ್ದ ಅಂಶ ಇನ್ನೊಂದು ಶಾಸನದಿಂದ ವೇದ್ಯವಾಗುತ್ತದೆ. ಇವನ ಆಳ್ವಿಕೆಗೆ ಸೇರಿದ ಶಾಸನಗಳು ಜಿಲ್ಲೆಯ ಮಂಚೇನಹಳ್ಳಿ, ಬೆಳ್ಳೂರು, ಅರಾಭಿಕೊತ್ತನೂರು, ಕೊರನಹಳ್ಳಿ, ಕಾಗಲವೇಣಿ, ರಾಮೇಶ್ವರ, ಹೊಸಕೋಟೆ, ಕೊಡಿಗೆಹಳ್ಳಿ, ಕತ್ತರಿಗುಪ್ಪೆ, ಮುಳಬಾಗಿಲು, ಕೆಂದಟ್ಟಿ, ತಿಪ್ಪಸಂದ್ರ, ಅರೆಹಳ್ಳಿ ಮುಂತಾದೆಡೆಗಳಲ್ಲಿ ಲಭಿಸಿವೆ.

### ಇಮ್ಮಡಿ ದೇವರಾಯ (1422–46)[12]

ಇಮ್ಮಡಿ ದೇವರಾಯ ಪ್ರಮುಖನಾಗಿದ್ದು, ಪ್ರಾಂತಾಧಿಕಾರಿಯಾಗಿ ಮುಳುವಾಯಿ ರಾಜ್ಯವನ್ನು 1417ರಲ್ಲಿ ಆಳುತ್ತಿದ್ದು ಅವನು ವಿಜಯನಗರ ಸಿಂಹಾಸನವನ್ನು ಏರಿದ ನಂತರ ಲಕ್ಕಣ್ಣ ಒಡೆಯನು ಮುಳುವಾಯಿ ರಾಜ್ಯದ ಆಡಳಿತವನ್ನು ನಿರ್ವಹಿಸುತ್ತಿದ್ದು, ಭೂದಾನ ನೀಡಿದ ಅಂಶವನ್ನು 1428ರ ಶಾಸನವೊಂದು ತಿಳಿಸಿದರೆ, ಸುಮಾರು 1430ರ ವೇಳೆಗೆ ಇದೇ ಲಕ್ಕಣ್ಣ ಒಡೆಯನು ಮುಳುವಾಯಿ–ಟೇಕಲ್ ನಾಡುಗಳೆರಡನ್ನೂ ಆಳುತ್ತಿದ್ದ ಅಂಶವನ್ನು ಇನ್ನೊಂದು ಶಾಸನ ಒಳಗೊಂಡಿದೆ.ಸುಮಾರು 1444ರಲ್ಲಿ ಅಣ್ಣಪ್ಪ/ಅರುಣಪ್ಪ ಒಡೆಯನು ಮುಳುವಾಯಿ ರಾಜ್ಯವನ್ನು ಆಳುತ್ತಿದ್ದ ಅಂಶ ಶಾಸನವೊಂದರಿಂದ ಗೊತ್ತಾಗುತ್ತದೆ. ಇಮ್ಮಡಿ ದೇವರಾಯನ ಕಾಲದ ಶಾಸನಗಳು ಜಿಲ್ಲೆಯ ಮುಳಬಾಗಿಲು, ಹುಣಸೇನಹಳ್ಳಿ, ವಿರೂಪಾಕ್ಷಪುರ, ಮಿಟ್ಟಹಳ್ಳಿ ಮುಂತಾದೆಡೆಗಳಲ್ಲಿ ಲಭಿಸಿದೆ.

[12] ಅಡಿಟಿಪ್ಪಣಿ–7, ಪುಟ ಸಂಖ್ಯೆ–96

**ಸಾಳುವರು**

ವಿಜಯನಗರ ಸಾಮ್ರಾಜ್ಯದ ಪೂರ್ವಭಾಗವು ಸಾಳುವ ದಂಡನಾಯಕ, ಕಠಾರಿ ಸಾಳುವ ಒಂದನೆಯ ನರಸಿಂಗರಾಜನ ಆಡಳಿತಕ್ಕೆ ಒಳಪಟ್ಟಿದ್ದು, ಇವನು ಬಲಿಷ್ಠನಾಗಲಾರಂಭಿಸಿದ ಅಂಶ, ಅವನ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ಈತನ ಆಳ್ವಿಕೆಗೆ ಸೇರಿದ 1467ರ ಸೀತಿಬೆಟ್ಟ ಶಾಸನದಿಂದ, ಸೀತಿಬೆಟ್ಟದ ಭೈರವೇಶ್ವರ ದೇವಾಲಯಕ್ಕೆ ಹಿಂದೆ ರಾಜೇಂದ್ರ ಚೋಳ ಹಾಗೂ ಮುಮ್ಮಡಿ ಬಲ್ಲಾಳರು ನೀಡಿದ ದತ್ತಿ ಗ್ರಾಮಗಳು ದುಷ್ಟ ವ್ಯಕ್ತಿಗಳ ಕೈಗೆ ಸಿಕ್ಕಿ, ದುರುಪಯೋಗಕ್ಕೆ ತುತ್ತಾಗಿ ದೇವರ ಪೂಜಾಕಾರ ಸ್ಥಗಿತಗೊಂಡಿದ್ದು, ಅದನ್ನು ಸಾಳುವ ನರಸಿಂಹನು ಪುನರ್ಭರಣ ಮಾಡಿದ ಅಂಶ ಗೊತ್ತಾಗುತ್ತದೆ. ಪ್ರಾಂತಾಧಿಕಾರಿಯಾಗಿ ಸೇವೆಯನ್ನು ಆರಂಭಿಸಿ, ರಾಜ್ಯಪಾಲನಾಗಿ ಬೆಳೆದು, ಅಂತಿಮವಾಗಿ 1485ರಲ್ಲಿ ವಿಜಯನಗರದ ಸಿಂಹಾಸನಕ್ಕೆ ತಾನೇ ವಾರಸುದಾರನಾಗುವಲ್ಲಿ ಇವನಿಗೆ ಪ್ರಧಾನಿ ಅಣ್ಣಮರಸಯ್ಯ, ಸೇನಾನಿ ಈಶ್ವರನಾಯಕ ಮತ್ತು ಇಬ್ಬರು ಮಕ್ಕಳಾದ ನರಸಣ್ಣ ನಾಯಕ ಹಾಗೂ ವೀರನರಸಿಂಹರ ಪೂರ್ಣ ಬೆಂಬಲ ಲಭಿಸಿತ್ತು. ಈಶ್ವರ ದಂಡನಾಯಕನು ಕೋಲಾರ ಪರಿಸರದಲ್ಲಿ ಆಡಳಿತ ನಿರ್ವಹಿಸುತ್ತಿದ್ದು, ಜಿಲ್ಲೆಯ ಒಂದೆರಡು ಶಾಸನಗಳಲ್ಲಿ ಪ್ರಧಾನವಾಗಿ ಉಲ್ಲೇಖಿಸಲ್ಪಟ್ಟಿದ್ದಾನೆ.

**ಹರಪನಾಯಕನಹಳ್ಳಿ ಪಾಳೇಪಟ್ಟುಗಳು**

ಮುಳಬಾಗಿಲು ತಾಲೂಕಿನ ಹರಪನಾಯಕನಹಳ್ಳಿಯ ಬಿಸೇಗೌಡನೆಂಬ ವೀರ, ಪುಟ್ಟ ಪಾಳೇಪಟ್ಟನ್ನು ಕಟ್ಟಿಕೊಂಡು ಸುಮಾರು 19ನೆಯ ಶತಮಾನದ ಆರಂಭದಲ್ಲಿ ಅಲ್ಪಕಾಲ ಆಳಿದನೆಂದು ಹೇಳುವ ಮೌಖಿಕ ಪರಂಪರೆ ಈ ಭಾಗದಲ್ಲಿ ಜನಜನಿತವಾಗಿದೆ. ಆದರೆ ಇದನ್ನು ಪುಸ್ವೀಕರಿಸುವ ಚಾರಿತ್ರಿಕ ದಾಖಲೆಗಳು ಲಭ್ಯವಿಲ್ಲ. ಆದರೂ ಮೌಖಿಕ ಪರಂಪರೆಯನ್ನು ಆಧರಿಸಿ ಬಿಸೇಗೌಡನ ಬದುಕನ್ನು ಅಲ್ಪಸ್ವಲ್ಪ ಚಿತ್ರಿಸಬಹುದಾಗಿದೆ. ಇವನ ವಂಶಜರು ಮೂಲತಃ ಕಂಚಿ–ಕಾಳಹಸ್ತಿ ಭಾಗದವರಾಗಿದ್ದು, ನಂತರದಲ್ಲಿ ಕೋಲಾರ ಜಿಲ್ಲೆಗೆ ಬಂದರೆಂದು ಹೇಳಲಾಗುತ್ತದೆ. ಬಾಲಕನಾಗಿದ್ದಾಗ, ಕಾಡಿನಲ್ಲಿ ಮೇಕೆ ಮೇಯಿಸುತ್ತಿದ್ದ ಬಿಸೇಗೌಡ.ಕಾಡಿನಲ್ಲಿ ವಾಸಿಸುತ್ತಿದ್ದ ಇರುಳಿಗರೊಂದಿಗೆ ಉತ್ತಮ ಒಡನಾಟ ಹೊಂದಿದ್ದು, ಅದರಿಂದ ಅವನಿಗೆ ಸಾಕಷ್ಟು ನೆರವು ಲಭಿಸಿತೆಂದು ಹೇಳಲಾಗುತ್ತದೆ. ಬಿಸೇಗೌಡನಿಗೆ ಇದ್ದ. ದಂಡು ಹಿರೇಗೌಡ ಹಾಗೂ ದಂಡು ಸಾಮೇಗೌಡ ಎಂಬ ಇಬ್ಬರು ಸೋದರರು, ಮೈಸೂರು ಅರಸರ ಸೇನೆಯಲ್ಲಿ ವೆ(ಬೆ)ಳ್ಳಿಕಟ್ಟೆ ಠಾಣೆಯ ಸರದಾರರಾಗಿದ್ದರಂತೆ. ಮೈಸೂರಿನಲ್ಲಿ ಬೆಳ್ಳಿಕಟ್ಟೆಗೆ ಮಿಷನ್ ರಸ್ತೆಯನ್ನು ದೇವರಾಜ ಅರಸು ರಸ್ತೆಯ ಪಾರ್ಶ್ವದಲ್ಲೇ ಕಾಣಬಹುದಾಗಿದೆ. ಈ ಬೆಳ್ಳಿಕಟ್ಟೆಗೆ ಸರದಾರರಾಗಿದ್ದ ಅವರ ಮೂಲಕವೇ ಬಿಸೇಗೌಡನೂ ಮೈಸೂರು ಅರಸರಲ್ಲಿ ಸೇವೆಗೆ ಸೇರಿದನೆಂದು ಹೇಳಲಾಗುತ್ತದೆ.

ಉತ್ತಮ ಯೋಧನಾಗಿದ್ದ ಇವನು ನುರಿತ ಇರುಳಿಗನೋರ್ವನಿಂದ ಶಸ್ತ್ರ ಪ್ರಾವಿಣ್ಯತೆಯನ್ನು ಪಡೆದಿದ್ದನೆಂದು ತಿಳಿದುಬರುತ್ತದೆ.[13] ಮುಂದೆ ಸುಮಾರು 1800ರ ಮೊದಲ ದಶಕದಲ್ಲಿ ಮೈಸೂರು ಅರಸರ ಪರವಾಗಿ ಚಂದ್ರಗಿರಿಗೆ ಮುತ್ತಿಗೆ ಹಾಕಿ ಕೊಳ್ಳೆ ಹೊಡೆದು ಯಶಸ್ವಿಯಾಗಿ ಹಿಂತಿರುಗುವಲ್ಲಿ ಬಿಸೇಗೌಡನಿಗೆ

[13] ಅಡಿಟಿಪ್ಪಣಿ–7, ಪುಟ ಸಂಖ್ಯೆ–104

ಅವನ ಸೋದರ ಚಿಕ್ಕವೆಂಕಟಗೌಡನ ಪೂರ್ಣ ಬೆಂಬಲವಿತ್ತೆಂದು ತಿಳಿದುಬರುತ್ತದೆ. ಅಲ್ಲಿಂದ ಕೊಳ್ಳೆ ಹೊಡೆದು ತಂದಿದ್ದ ಸಂಪತ್ತನ್ನು ಆಳರಸರಿಗೆ ಒಪ್ಪಿಸಿದ ಬಿಸೇಗೌಡನ ನಿಷ್ಠೆಯನ್ನು ಮೆಚ್ಚಿದ ಅರಸರು, ಅವನಿಗೆ ಮಾಣಿಕ್ಯಗಳಿಂದ ಕೂಡಿದ ಹಿಡಿ ಇರುವ ಖಡ್ಗವನ್ನು ನೀಡಿ ಸನ್ಮಾನಿಸಿದರೆಂದೂ ಹೇಳಲಾಗುತ್ತದೆ. ಆದರೆ ಈ ಸೋದರರ ಏಳಿಯನ್ನು ಸಹಿಸದ ನಂಗಲಿಯ ಗುಮಾಸ್ತನೊಬ್ಬ ಮೋಸದಿಂದ ಬಿಸೇಗೌಡನನ್ನು ತಾನೇ ಕೊಲ್ಲಿಸಿ, ಆತ್ಮಹತ್ಯೆ ಮಾಡಿಕೊಂಡನೆಂದು ಪುಕಾರು ಎಬ್ಬಿಸಿದನೆಂದು ಹೇಳಲಾಗುತ್ತದೆ. ಮಕ್ಕಳಿಲ್ಲದ ಬಿಸೇಗೌಡನ ಮಡದಿ ಚೌಡಮ್ಮಳು ತನ್ನ ಮೈದುನನ ಮಗುವನ್ನೆ ದತ್ತು ಪಡೆದ ಸಲಹಿದಳಂತೆ.ಕ್ರಮೇಣ ಈ ಬಿಸೇಗೌಡನ ದುರಂತದ ಸಾವನ್ನು ತಿಳಿದ ಮೈಸೂರು ಅರಸರು, ಚೌಡಮ್ಮನಿಗೆ ಜೋಡಿಗ್ರಾಮ ಮಾನ್ಯ ನೀಡಿ, ರಕ್ತಮಾನ್ಯವಾಗಿ ಕೊಂಡೇನಹಳ್ಳಿಯನ್ನು ದತ್ತಿಕೊಟ್ಟರೆಂದೂ ಹೇಳಲಾಗುತ್ತದೆ. ಬಿಸೇಗೌಡನ ಚಿಕ್ಕ ಕೋಟೆ ಮನೆ ಈಗಲೂ ಇದ್ದು, ಅದರಲ್ಲಿ ಅವನ ವಂಶಜರು ವಾಸವಿದ್ದಾರೆ. ಅವನದೆಂದು ಹೇಳಲಾಗುವ ಖಡ್ಗ, ಬಂದೂಕು ಹಾಗೂ ದಿನಚರಿ ಇದ್ದು, ವಿಜಯದಶಮಿಯಂದು ಅವನ್ನು ಹೊರಕ್ಕೆ ತೆಗೆದು ಪೂಜಿಸಿ ಮತ್ತೆ ಜೋಪಾನದಿಂದ ಭದ್ರಪಡಿಸಲಾಗುತ್ತದೆ.

ಕೋಲಾರ ಜಿಲ್ಲೆಯ ತಾಲೂಕು ಕೇಂದ್ರವಾದ ಮುಳಬಾಗಿಲು ಐತಿಹಾಸಿಕ ಹಿನ್ನೆಲೆಯಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಒಳಗೊಂಡಿದೆ.ಮುಳಬಾಗಿಲು ಅರಸರು ದೊಡ್ಡ ಸಾಮ್ರಾಜ್ಯಗಳ ನೆರಳಲ್ಲಿ ಕಾರ್ಯನಿರ್ವಹಿಸಿದರೂ, ಸ್ಥಳೀಯ ಆಡಳಿತ, ಸಂಸ್ಕೃತಿ ಮತ್ತು ಸಮಾಜದ ರೂಪುಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇವರ ಇತಿಹಾಸ ಅಧ್ಯಯನವು ಕರ್ನಾಟಕದ ಸ್ಥಳೀಯ ಇತಿಹಾಸ ಸಂಶೋಧನೆಗೆ ಅಗತ್ಯವಾಗಿದೆ. ಕೋಲಾರ ಜಿಲ್ಲೆಯ ಅತಿ ಹೆಚ್ಚು ಶಾಸನಗಳು ಮುಳಬಾಗಿಲು ಪ್ರಾಂತ್ಯದಲ್ಲಿ ದೊರೆತಿದ್ದು, ಈ ಪ್ರಾಂತ್ಯವನ್ನು ಕೇಂದ್ರವಾಗಿಟ್ಟುಕೊಂಡು ನೇರವಾಗಿ ಆಳ್ವಿಕೆ ಮಾಡಿದಂತಹ ಪ್ರಮುಖ ರಾಜ ಮನೆತನಗಳು ಇಲ್ಲದಿದ್ದರೂ . ಅನೇಕ ಪ್ರಮುಖ ರಾಜ ಮನೆತನಗಳ ಅಧೀನ ಪ್ರಾಂತ್ಯವಾಗಿ ಆಳ್ವಿಕೆ ಮಾಡಿದಂತಹ ರಾಜರುಗಳ ಉಲ್ಲೇಖ ಶಾಸನಗಳಲ್ಲಿ ಕಂಡುಬಂದಿದೆ. ಇದರ ಆಧಾರದ ಮೇಲೆಗೆ ಈ ಲೇಖನದಲ್ಲಿ ಮುಳುಬಾಗಿಲು ಪ್ರಾಂತ್ಯದ ರಾಜಕೀಯ ಇತಿಹಾಸವನ್ನು ಕಾಲಾನುಕ್ರಮದಲ್ಲಿ ಆಳ್ವಿಕೆ ಮಾಡಲ್ಪಟ್ಟ ರಾಜರು, ಪಟ್ಟುಗಾರರು ಸ್ಥಳೀಯ ನಾಯಕರುಗಳನ್ನ ಶಾಸನಗಳಲ್ಲಿ ಗುರುತಿಸಿರುವಂತೆ ಅವರ ಆಡಳಿತ ವ್ಯವಸ್ಥೆ , ಸ್ಥಳೀಯ ಪ್ರಾಂತ್ಯದ ಅಭಿವೃದ್ಧಿಗಾಗಿ ಕೈಗೊಂಡ ದಾನ ದತ್ತಿಗಳು, ಸ್ಥಳೀಯ ಸರ್ಕಾರ, ನೀರಾವರಿ ಅಭಿವೃದ್ಧಿ, ಶಿಕ್ಷಣದ ವ್ಯವಸ್ಥೆ , ತೆರಿಗೆಗಳು, ಯುದ್ಧಗಳು, ಧರ್ಮ, ದೇವಾಲಯಗಳ ನಿರ್ಮಾಣ ಗಳ ಮಾಹಿತಿ ಬಗ್ಗೆ ಈ ಲೇಖನದಲ್ಲಿ ತಿಳಿಸುವ ಪ್ರಯತ್ನವಾಗಿದೆ.

**ಪರಾಮರ್ಶನ ಗ್ರಂಥಗಳು**


- ಚಿತ್ತರಂಜನ್, ಹೆಚ್. (2005). *ಕೋಲಾರ ಜಿಲ್ಲಾ ಗ್ಯಾಜೆಟಿಯರ್.* ಕರ್ನಾಟಕ ಸರ್ಕಾರ.
- ಗೋಪಾಲ್, ಬಿ.ಆರ್. (ಸಂ.) (2004). *ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

- ನಂಜುಂಡಸ್ವಾಮಿ, ಎಚ್. (1998). *ಗಂಗವಂಶ ಮತ್ತು ಗಂಗವಾಡಿ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
- ರೈಸ್ ಬಿ. ಎಲ್. ಎಫಿಗ್ರಾಫಿಯಾ ಆಫ್ ಕರ್ನಾಟಿಕ. ವ್ಯಾಲ್ಯೂಮ್ 10.
- ರೈಸ್, ಬಿ.ಎಲ್., ಮೈಸೂರು ರಾಜ್ಯ ಗೆಜೆಟಿಯರ್, ಸಂಪುಟ I ಮತ್ತು II, 1897.
- ಮಹಾಲಿಂಗಂ, ಟಿ.ವಿ. (1951). *ದ ಬನಾಸ್ ಇನ್ ಸೌತ್ ಇಂಡಿಯನ್ ಹಿಸ್ಟರಿ.* ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ.
- ನರಸಿಂಹೇಗೌಡ ನಾರಣಾಪುರ. (2005). *ಕೋಲಾರ ಜಿಲ್ಲೆಯ ಆಚರಣೆಗಳು ಮತ್ತು ಸಂಪ್ರದಾಯಗಳು.* ಕಿರಣ ಕಿಶೋರ ಪ್ರಕಾಶನ,
- ಶಿವಪ್ಪ ಜಿ. ಅರಿವು. (2012). *ಮುಳಬಾಗಿಲು ತಾಲೂಕು ಚರಿತ್ರೆ ಮತ್ತು ಸಂಸ್ಕೃತಿ.* ಎಸ್&ಎಸ್ ಪಬ್ಲಿಕೇಷನ್ಸ್.
- ಸೂರ್ಯನಾಥ್, ಯು. (1985). *ಕರ್ನಾಟಕ ರಾಜ್ಯ ಗೆಜೆಟಿಯರ್.* ಕರ್ನಾಟಕ ಸರ್ಕಾರ.
- ಸ್ಮಿತಾರೆಡ್ಡಿ. (2001). *ಮುಳಬಾಗಿಲು ಅರಸರು ದಕ್ಷಿಣ ಕರ್ನಾಟಕದ ಅರಸು ಮನೆತನಗಳು,* ಹಂಪಿ.